ದಿನಾಂಕ: ಜನವರಿ 24, 2014

# ಸರ್ವೇಕ್ಷಣೆಗಳು ಏನು ಸೂಚಿಸುತ್ತವೆ?

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

2014ರ ಸಾರ್ವತ್ರಿಕ ಚುನಾವಣೆಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲು ಎರಡು ವಿಭಿನ್ನ ಸಂಸ್ಥೆಗಳು ಸರ್ವೇಕ್ಷಣೆ ನಡೆಸಿವೆ. ಇಂತಹ ಸರ್ವೇಕ್ಷಣೆಗಳ ಕುರಿತು, ಅದರಲ್ಲೂ ಚುನಾವಣೆಗಳು ನಡೆಯುವ 3-4 ತಿಂಗಳ ಮುನ್ನ ನಡೆದ ಜನಾಭಿಪ್ರಾಯ ಸಂಗ್ರಹದ ಕುರಿತು ನನಗೆ ವಿಶೇಷವಾದ ನಂಬಿಕೆ ಇಲ್ಲ. ಆದರೂ, ಸರ್ವೇಕ್ಷಣೆ ನಡೆಸಿದ ಸಂಸ್ಥೆಗಳ ವಿಶ್ವಾಸಾರ್ಹತೆ ಪ್ರಮಾಣ ಉತ್ತಮವಾಗಿರುವ ಹಿನ್ನಲೆಯಲ್ಲಿ, ಸಾರ್ವಜನಿಕ ಅಭಿಪ್ರಾಯದ ಪ್ರಸ್ತುತ ಲಕ್ಷಣಗಳ ದಿಕ್ಸೂಚಿಯನ್ನಷ್ಟೆ ಈ ಸರ್ವೇಕ್ಷಣೆಗಳು ನೀಡುತ್ತವೆ ಎಂದು ನಂಬಬಹುದು.

ಈ ಸಂಸ್ಥೆಗಳು ನೀಡಿದ ಅಂಕಿಅಂಶದ ಪ್ರಕಾರ ಭಾಜಪ ಅಗ್ರ ಸ್ಥಾನದಲ್ಲಿದೆ. ಲೋಕ ಸಭಾ ಚುನಾವಣೆಗಳಲ್ಲಿ ಈ ವರೆಗೂ ಭಾಜಪಗಳಿಸಿದ ಗರಿಷ್ಠ ಸಂಖ್ಯೆಯೆಂದರೆ 183. ಪ್ರಸ್ತುತ ಮುನ್ಸೂಚನೆಯ ಪ್ರಕಾರ ಮುಂಬರುವ ಚುನಾವಣೆಯಲ್ಲಿ ಪಕ್ಷವು ಈ ಸಂಖ್ಯೆಯನ್ನು ದಾಟುವ ಸಂಭವವಿದೆ. ಎನ್‌ಡಿಎ ಅಂಗ ಪಕ್ಷಗಳಾದ ಶಿವಸೇನೆ ಹಾಗೂ ಅಕಾಲಿದಳ ಉತ್ತಮ ರಾಜಕೀಯ ಪರಿಸ್ಥಿತಿಯಲ್ಲಿವೆ. ಕಾಂಗ್ರೆಸ್ ಪಕ್ಷ ಕಳಪೆ ಪ್ರದರ್ಶನ ನೀಡಿ ಅತಿ ಕಡಿಮೆ ಸಂಖ್ಯೆ ಪಡೆಯುವ ಸಂಕೇತಗಳು ದೊರೆತಿವೆ. 2014ರ ಚುನಾವಣೆಯಲ್ಲಿ ಅದರ ಬಲಾಬಲ ಎರಡಂಕಿಗೆ ಇಳಿಯುವ ಸಾಧ್ಯತೆಯಿದೆ. ಅಗ್ರಮಾನ್ಯ ಪಕ್ಷ ಹಾಗೂ ಎರಡನೆ ದೊಡ್ಡ ಪಕ್ಷಕ್ಕೂ ನಡುವೆ ಭಾರಿ ಅಂತರವಿರುವ ಸಂಕೇತಗಳನ್ನೂ ಸಹ ಸರ್ವೇಕ್ಷಣೆ ನೀಡಿದೆ.

ಸುಮಾರು 10 ರಾಜಕೀಯ ಪಕ್ಷಗಳು ಐದರಿಂದ 25 ಸ್ಥಾನಗಳನ್ನು ಗಳಿಸುವ ಸಾಧ್ಯತೆಯಿದೆ. ಈ ಎಲ್ಲಾ ಪಕ್ಷಗಳು ಸೇರಿ ಸರ್ಕಾರ ರಚಿಸುವ ಸಾಧ್ಯತೆಯಿಲ್ಲ. ಎಐಎಡಿಎಂಕೆ ಹಾಗೂ ಡಿಎಂಕೆ ಒಂದೇ ಕಡೆ ಇರಲು ಸಾಧ್ಯವಿಲ್ಲ. ತ್ರಿಣಮೂಲ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಒಂದೇ ಪಂಗಡಕ್ಕೆ ಸೇರಲು ಸಾಧ್ಯವಾಗದು. ಬಿಎಸ್‌ಪಿ ಮತ್ತು ಸಮಾಜವಾದಿ ಪಕ್ಷಗಳು ಕೈ ಜೋಡಿಸಲು ಅಸಾಧ್ಯ. ಭಾಜಪ ಹಾಗೂ ಎನ್‌ಡಿಎ ಅಂಗಪಕ್ಷಗಳನ್ನು ಹೊರತು ಪಡಿಸಿ, ರಾಜ್ಯಗಳಲ್ಲಿ ಭಾಜಪ ಏತರ ಮತ್ತು ಎಡ ಪಕ್ಷಗಳನ್ನು ಬಿಟ್ಟು ಉಳಿದ ರಾಜಕೀಯ ಪಕ್ಷಗಳ ಬಲಾಬಲ ಸುಧಾರಿಸುವ ಸಂಕೇತಗಳಿವೆ. ಎಐಎಡಿಎಂಕೆ ಉತ್ತಮ ಫಲಿತಾಂಶಗಳಿಸುವ ಸಂಕೇತಗಳಿವೆ. ಟಿಡಿಪಿ ಪುನಶ್ಚೇತನಗೊಳ್ಳುತ್ತಿದ್ದು ತನ್ನ ಮತ ಬ್ಯಾಂಕನ್ನು ಭದ್ರಪಡಿಸಿಕೊಳ್ಳುತ್ತಿದೆ. ಬಿಜೆಡಿ ತನ್ನ ಸುಭದ್ರ ರಾಜಕೀಯ ಮನ್ನಣೆಯನ್ನು ಉಳಿಸಿಕೊಂಡಿದೆ. ಟಿಎಂಸಿ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಗಳಿವೆ. ವೈಎಸ್‌ಆರ್ ಕಾಂಗ್ರೆಸ್‌ಗಳಿಸಿದ್ದ ಭಾರಿ ಜನಬೆಂಬಲ ಈಗ ಕ್ಷೀಣಿಸುತ್ತಿದ್ದರು, ಸೀಮಾಂಧ್ರ ಭಾಗದಲ್ಲಿ ಕೆಲವಾರು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಗಳಿವೆ.

ಭಾಜಪದೊಂದಿಗೆ 17 ವರ್ಷಗಳ ದೀರ್ಘ ಸಖ್ಯ ಬೆಳೆಸಿಕೊಂಡ ಜೆಡಿ(ಯು) ಪಕ್ಷವು ಭಾಜಪ ವಿರೋಧಿ ಪಕ್ಷವಾಗಿ ಗುರುತಿಸಿಕೊಂಡ ನಂತರ ಅದರ ರಾಜಕೀಯ ಬಲ ಕುಂದಿದೆ. ಲೋಕ ಸಭಾ ಚುನಾವಣೆಯಲ್ಲಿ ಕಳಪೆ ಪ್ರದರ್ಶನ ನೀಡಿದರೆ, ಬಿಹಾರ್ ಸರ್ಕಾರ ಮತ್ತಷ್ಟು ದುರ್ಬಲಗೊಳ್ಳಲಿದೆ. ಯುಪಿಎ ಅಂಗ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಎನ್‌ಸಿಪಿ ಪಕ್ಷಗಳು ತಮ್ಮ ರಾಜ್ಯಗಳಲ್ಲಿ ವಿಪಕ್ಷಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುವ ಪರಿಸ್ಥಿತಿ ಎದುರಿಸುತ್ತಿವೆ.

ತಮಿಳುನಾಡು ಹಾಗೂ ಒಡಿಶ್ಶಾದಲ್ಲಿ ಭಾಜಪಗೆ ದೊರೆಯುವ ಮತಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಅಸ್ಸಾಂನಲ್ಲಿ ಅದರ ಪರಿಸ್ಥಿತಿ ಸ್ಥಿರವಾಗಿದೆ. ಆಂಧ್ರಪ್ರದೇಶ ಹಾಗೂ ಪಶ್ಚಿಮ ಬಂಗಾಳದಲ್ಲಿ ಪಕ್ಷಕ್ಕೆ ಎರಡಂಕಿ ಫಲಿತಾಂಶ ದೊರೆಯುವ ಸಾಧ್ಯತೆಗಳಿವೆ. ಉತ್ತರ ಹಾಗೂ ಕೇಂದ್ರ ಮತ್ತು ಪಶ್ಚಿಮ ಭಾರತದಲ್ಲಿ, ಭಾಜಪ ಬಲಾಬಲ ಸಮರ್ಪಕವಾಗಿ ಬೆಳೆದಿದೆ. ಎಲ್ಲಕ್ಕಿಂತ ಪ್ರಮುಖ ಅಂಶವೆಂದರೆ, ಸರ್ವೇಕ್ಷಣೆಯ ಪ್ರಕಾರ ಪ್ರತಿಯೊಂದು ರಾಜ್ಯದಲ್ಲಿ ಭಾಜಪಗೆ ದೊರೆಯಬೇಕಾದ ಮತಗಳ ಸಂಖ್ಯೆಗಿಂತ, ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಅಭ್ಯರ್ಥಿ ಆಗಿರುವ ನಿರ್ಣಯಕ್ಕೆ ಶೇಕಡ 15 ರಿಂದ 20ರಷ್ಟು ಹೆಚ್ಚಿನ ಮತಗಳು ಲಭಿಸಿವೆ. ಪಕ್ಷದ ಭದ್ರಕೋಟೆ ಇರುವ ಕಡೆಗಳಲ್ಲಿ ಮತಗಳ ಸಂಖ್ಯೆ ವೃದ್ಧಿಸುವ ಮತ್ತು ಬಲಾಬಲ ಕಡಿಮೆಯಿರುವ ಮತಕ್ಷೇತ್ರಗಳಲ್ಲಿ ಶೇಕಡವಾರು ಮತಗಳನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಮೋದಿಯವರು ಪ್ರದರ್ಶಿಸಿದ್ದಾರೆ. ಇಲ್ಲದಿದ್ದಲ್ಲಿ ತಮಿಳುನಾಡಿನಲ್ಲಿ ಶೇಕಡ 17 ಹಾಗೂ ಒಡಿಶ್ಶಾದಲ್ಲಿ ಶೇಕಡ 25ರ ಮತಗಳನ್ನು ಅಂದಾಜಿಸಲು ಹೇಗೆ ಸಾಧ್ಯ.

ಈ ಸನ್ನಿವೇಶದಲ್ಲಿ ಸರ್ಕಾರ ರಚಿಸಲು ಯಾರಿಗೆ ಸಾಧ್ಯ? ಭಾಜಪ ಹಾಗೂ ಎನ್‌ಡಿಎ ಹೊರತು ಪಡಿಸಿ ಬೇರೆ ಪ್ರತಿಸ್ಪರ್ಧಿ ಇದ್ದಾರೆಯೇ?

ಸಣ್ಣ ಪಕ್ಷಗಳು ಸೇರಿಕೊಂಡು ರೂಪಿಸುವ ಸಮ್ಮಿಶ್ರ ಸರ್ಕಾರ ಸ್ಥಿರವಾಗಿರಲು ಸಾಧ್ಯವಿಲ್ಲ. ಅವರಿಗೆ ಸರ್ಕಾರ ರೂಪಿಸುವಷ್ಟು ಸ್ಥಾನಗಳು ಲಭಿಸುವುದೇ ಅನುಮಾನ. ಕೇವಲ ಎರಡಂಕಿ ಸ್ಥಾನಗಳನ್ನು ಗಳಿಸುವ ಸಾಧ್ಯತೆ ಇರುವ ಕಾಂಗ್ರೆಸ್ ಪಕ್ಷವು ಪರ್ಯಾಯ ರಾಜಕೀಯ ಒಕ್ಕೂಟಕ್ಕೆ ಬಾಲಂಗೋಸಿಯಾಗಿ ವರ್ತಿಸಬಹುದು. ಆ ಒಕ್ಕೂಟದ ಪ್ರಮುಖ ಪಕ್ಷವಾಗಿ ವರ್ತಿಸಲು ಅದಕ್ಕೆ ಸಾಧ್ಯವಾಗದು. ಇದರ ತಾರ್ಕಿಕ ಸಾರಾಂಶವೆಂದರೆ, ಕೇವಲ ಭಾಜಪ ಹಾಗೂ ಎನ್‌ಡಿಎ ನೇತೃತ್ವದ ಸರ್ಕಾರ ದೇಶಕ್ಕೆ ಸುಭದ್ರ ಸರ್ಕಾರ ನೀಡಲು ಸಾಧ್ಯ. ಈ ಹಿನ್ನಲೆಯಲ್ಲಿ, ಅಟಲ್ ಅವರು ರೂಪಿಸಿದ ಬಹು ಪಕ್ಷ ಎನ್‌ಡಿಎ ಸರ್ಕಾರ ಮತ್ತೊಮ್ಮೆ ಸಾಕಾರಗೊಂಡು ಸರ್ಕಾರದ ಚುಕ್ಕಾಣಿ ಹಿಡಿಯುವ ಸಾಧ್ಯತೆ ಕಾಣುತ್ತಿದೆ. ಬಹು ಪಕ್ಷದ ಎನ್‌ಡಿಎದೊಂದಿಗೆ ಗುರುತಿಸಿಕೊಂಡ ಪಕ್ಷಗಳು ಉತ್ತಮ ರಾಜಕೀಯ ಪರಿಸ್ಥಿತಿಯಲ್ಲಿವೆ. ಎನ್‌ಡಿಎದೊಂದಿಗೆ ಗುರುತಿಸಿಕೊಂಡ ಪಕ್ಷಗಳೊಂದಿಗೆ ರಾಜ್ಯಗಳಲ್ಲಿರುವ ಕಾಂಗ್ರೆಸ್ ಏತರ ನೆಲೆ ಆವರಿಸಿರುವ ಸ್ಥಳೀಯ ಪಕ್ಷಗಳು ಸೇರಬೇಕಾಗಿದೆ. ಆಗ ಭಾರತದ ಒಕ್ಕೂಟ ವ್ಯವಸ್ಥೆ ಗೌರವಿಸುವ ರಾಜಕಾರಣಕ್ಕೆ ನಿಜವಾದ ಪ್ರಾತಿನಿಧ್ಯ ದೊರೆಯುತ್ತದೆ.

ಚುನಾವಣೆ ಎದರಾಗಿರುವ ಹಿನ್ನಲೆಯಲ್ಲಿ, ಪ್ರಭಾವಿ ನಾಯಕತ್ವ, ಅರ್ಥವ್ಯವಸ್ಥೆಯ ಕಾಯಕಲ್ಪ, ಭ್ರಷ್ಟಾಚಾರ ನಿರ್ಮೂಲನೆ ಪ್ರಮುಖ ವಿಚಾರಗಳಾಗಿವೆ. ಸ್ಥಿರ ಸರ್ಕಾರ ಪಡೆಯುವ ಹೆಬ್ಬಯಕೆ ಜನರ ಮನಸ್ಸಿನಲ್ಲಿ ಎಲ್ಲಕ್ಕಿಂತ ಮಿಗಿಲಾಗಿದೆ ಎಂದೂ ಸಹ ಜನಾಭಿಪ್ರಾಯ ಸಂಗ್ರಹದಿಂದ ತಿಳಿದುಬಂದಿದೆ. ಭಾಜಪ ಹಾಗೂ ಬಹು ಪಕ್ಷಗಳ ಎನ್‌ಡಿಎ ಹೊರತು ಪಡಿಸಿ ಸ್ಥಿರ ಸರ್ಕಾರ ನೀಡಲು ಯಾರಿಂದ ಸಾಧ್ಯವಿದೆ?

**************